ವಾಹನಗಳ ಮತ್ತು ಸರ್ಕಾರದ ವಾಹನಗಳಂ ಸರಾಸರಿ ನೋಂದಾವಣೆಯಾಗುತ್ತಿವೆ. ಆದ್ದರಿಂದ ವಾಹನಗಳ ನೋಂದಾವಣೆ ಹೆಚ್ಚಾದಂತೆ ಸಿಬ್ಬಂದಿಯನ್ನು ಸಹ ಹೆಚ್ಚು ಮಾಡತಕ್ಕಂಥ ಒಂದು ಅಳತೆ ಗೋಲನ್ನು ಅಥವಾ ಸಾಮರಸ್ಯವನ್ನು ಸಾಧನೆ ಮಾಡುವುದಕ್ಕೆ ಆಗದಿದ್ದರೂ ಸಹ ಈ ಬೇಡಿಕೆಯನ್ನು ಈಡೇರಿಸತಕ್ಕ ಸಾಮರ್ಥ್ಯ ಸರ್ಕಾರಕ್ಕೆ ಇದೆ. ಆದರೆ ಈ ಹಿಂದೆ ೧೯೮೮ರಲ್ಲಿ ಈ ಒಂದು ಪ್ರೊಪೋಜಲನ್ನು ಸರ್ಕಾರ ಒಪ್ಪಿಲ್ಲ. ಈಗ ಸನ್ಮಾನ್ಯ ಸದಸ್ಯರು ಏನು ಕಳಕಳಿ ವ್ಯಕ್ತಪಡಿಸಿದ್ದಾರೆ, ಅದನ್ನು ಪುರುಚಿಂತನೆ ಮಾಡತಕ್ಕಂಥ ಆಲೋಚನೆ ಸರ್ಕಾರಕ್ಕೆ ಇದೆ.

SRI BLASIUS M D' SOUZA.—Under the obligatory functions of the Government, the first function I should say, is maintaining law and order. There should not be any financial constraints. Financial constraints can be for any other duty of the Government. Our Hon'ble Minister has agreed that in 1978 there is a proposal and this 88 police force is not sufficient. I request the hon·ble minister once again to tell me whether there is any other priority over and above the law and order priority.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಒಂದೊಂದು ಇಲಾಖೆಯಲ್ಲಿ ಒಂದೊಂದು ಪ್ರಯಾರಿಟಿ ಇರುತ್ತದೆ. ಕೆಲವಕ್ಕೆ ಆದ್ಯತೆ ಹೆಚ್ಚಿರುತ್ತದೆ ಕೆಲವಕ್ಕೆ ಆದ್ಯತೆ ಕಡಿಮೆ ಇರುತ್ತದೆ. ಕಾನೂನು ವ್ಯವಸ್ಥೆಯೂ ಒಂದು ಆದ್ಯತೆ ಕೊಡತಕ್ಕ ವಿಚಾರ ಹೌದು ಆದರೆ ಈ ರಾಜ್ಯದ ಒಟ್ಟು ಆದ್ಯತೆಗಳ ಒಂದು ತಳಹದಿಯ ಮೇಲೆ ಬಂತ್ತು, ಈ ಆದ್ಯತೆಯನ್ನು ಪೂರೈಸುವುದರಲ್ಲಿ, ಹಣಕಾಸಿನ ಸಂಪನ್ಮೂಲದ ವ್ಯವಸ್ಥೆಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ತಮಗೆ ಗೊತ್ತಿದೆ. ಇದು ಮಂಗಳೂರು ನಗರಕ್ಕೆ ಸೀಮಿತವಾದಂಥ ಪ್ರಶ್ನೆಯಲ್ಲ. ಇಡೀ ಕರ್ನಾಟಕ ರಾಜ್ಯದ ಪೋಲೀಸ್ ವ್ಯವಸ್ಥೆಯಲ್ಲಿಯೇ ಸಾಕಷ್ಟು ಅನುಕೂಲಗಳನ್ನು ಒದಗಿಸಬೇಕಾದುದಿದೆ. ಅದನ್ನು ಕ್ರಮೇಣ ಹೇಗೆ ನಿರ್ವಹಿಸುವುದಕ್ಕೆ ಸಾಧ್ಯವಿದೆಯೇ ಅದನ್ನು ಹಂತ ಹಂತವಾಗಿ ಸರ್ಕಾರ ಖಂಡಿತವಾಗಿಯೂ ಮಾಡುತ್ತದೆ.

ಶ್ರೀಮತಿ ಸರೋಜಿನಿ ಮಹಿಷಿ ಸಮಿತಿಯ ವರದಿ

೪೫೬. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನ್ನಡಿಗರಿಗೆ ಉದ್ಯೋಗಾವಕಾಶ ಒದಗಿಸುವ ಸಲುವಾಗಿ ನೇಮಿಸಿದ ಶ್ರೀಮತಿ ಸರೋಜಿನಿ ಮಹಿಷಿ ವರದಿಯನ್ನು ಸರ್ಕಾರಕ್ಕೆ ಯಾವಾಗ ಒಪ್ಪಿಸಲಾಯಿತು ಹಾಗೂ ಒಪ್ಪಿಕೊಳ್ಳಲಾಗಿದೆಯೇ.

ಆ) ಹಾಗಿದ್ದಲ್ಲಿ ಆ ವರದಿಯನ್ನು ಅನುಷ್ಠಾನಕ್ಕೆ ತರಲು ಕೈಗೊಂಡ ಕ್ರಮಗಳೇನು ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಡಾ. ಸರೋಜಿನಿ ಮಹಿಷಿ ಸಮಿತಿಯು ಅಂತಿಮ ವರದಿಯನ್ನು ಸರ್ಕಾರಕ್ಕೆ ದಿನಾಂಕ ೩೦-೧೨-೮೬ರಂದು ಸಲ್ಲಿಸಿತು. ಈ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸುವುದಕ್ಕೋಸ್ಕರ ಡಾ. ವಿ. ವೆಂಕಟೇಶ್ (ಮಾಜಿ ಸಂಸತ್ ಸದಸ್ಯರು) ಇವರ ಅಧ್ಯಕ್ಷತೆಯಲ್ಲಿ ಕನ್ನಡಿಗರ ಉದ್ಯೋಗ ಸಮಿತಿಯನ್ನು ದಿನಾಂಕ ೧೮-೫-೮೮ರಂದು ಸರ್ಕಾರವು ರಚಿಸಿತು. ಈ ಸಮಿತಿಯು ಮಧ್ಯಂತರ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿತು. ಡಾ. ವಿ. ವೆಂಕಟೇಶ್‌ರವರು ಕನ್ನಡಿಗರ ಉದ್ಯೋಗ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ದಿನಾಂಕ ೩೦-೬-೮೯ರಂದು ರಾಜೀನಾಮೆಯನ್ನು ನೀಡಿದರು. ಆದರೆ ಸಮಿತಿಯು ಅಂತಿಮ ವರದಿಯನ್ನು ಸಲ್ಲಿಸುವವರೆಗೆ ಅಥವಾ ದಿನಾಂಕ ೧೫-೧೧-೮೯ರವರೆವಿಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆವಿಗೆ ಸಮಿತಿಯ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯುವಂತೆ ಡಾ. ವಿ.ವೆಂಕಟೇಶ್‌ರವರನ್ನು ಸರ್ಕಾರವು ಕೋರಿತು. ಆದರೆ ಈ ಸಮಿತಿಯು ದಿನಾಂಕ ೧೫-೧೧-೮೯ರೊಳಗೆ ಅಂತಿಮ ವರದಿಯನ್ನು ಸಲ್ಲಿಸದಿದ್ದ ಕಾರಣ ಸಮಿತಿಯನ್ನು ಅಂತ್ಯಗೊಳಿಸಿ, ಈ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ಮಧ್ಯಂತರ ವರದಿಗಳಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸಲು ಕಾನೂನು, ಸಂಸದೀಯ, ಯೋಜನೆಮತ್ತು ಪ್ರವಾಸೋದ್ಯಮ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ದಿನಾಂಕ ೧೬-೩-೯೦ರಂದು ರಚಿಸಿದೆ.

ಶ್ರೀ ಶಿವಾನಂದ ಕೌಜಲಗಿ ಹೆಚ್.— ಮಾನ್ಯ ಅಧ್ಯಕ್ಷರೇ, ಈ ಕನ್ನಡಿಗರಿಗೆ ಉದ್ಯೋಗ ಒದಗಿಸುವ ಸಲುವಾಗಿ ಶ್ರೀಮತಿ ಸರೋಜಿನಿ ಮಹಿಷಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಗಿತ್ತು. ೧೯೮೪ನೇ ಇಸವಿಯಲ್ಲಿ ವರದಿಯನ್ನು ಸರ್ಕಾರಕ್ಕೆ ಅವರು ಸಲ್ಲಿಸಿದರು. ಆಮೇಲೆ ತಮಿಳರು ಮತ್ತು ಮಲೆಯಾಳಿ ಜನರು ಸರ್ಕಾರದ ಮೇಲೆ ಒತ್ತಾಯ ತಂದು ಕನ್ನಡಿಗರಿಗೇ ಉದ್ಯೋಗ ಕೊಡುವುದರಿಂದ ನಮಗೆ ತೊಂದರೆಯಾಗುತ್ತದೆಂದು ಹೇಳಿದ್ದರು. ಅದನ್ನು ತಿಳಿದು ನಂತರ ಡಾ॥ ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಿಸಲಾಯಿತು. ಅವರು ಸಹ ೧೯೮೯ರಲ್ಲಿ ಒಂದು ರಿಪೋರ್ಟನ್ನು ಸರ್ಕಾರಕ್ಕೆ ಕೊಟ್ಟರು. ಆ ಎರಡೂ ರಿಪೋರ್ಟ್‌ಗಳನ್ನೂ ಪರಿಶೀಲನೆ ಮಾಡಿ ಅನುಷ್ಠಾನಕ್ಕೆ ಸರ್ಕಾರ ಯಾವಾಗ ತರುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೇ, ಡಾ॥ ಸರೋಜಿನಿ ಮಹಿಷಿಯವರ ಸಮಿತಿಯು ತನ್ನ ಅಂತಿಮ ವರದಿಯನ್ನು ಸರ್ಕಾರಕ್ಕೆ ೨೪-೭-೧೯೮೭ರಂದು ಕೊಟ್ಟಿತು. ಆ ವರದಿಯನ್ನು ಪರಿಗಣಿಸಿ ಈ ಒಂದು ಶಿಫಾರಸ್‌ಗಳನ್ನು ಪರಿಶೀಲಿಸಲಿಕ್ಕೆ ಒಂದು ಸಮಿತಿಯನ್ನು ೧೯-೫-೧೯೮೮ರಲ್ಲಿ ಮಾಡಲಾಯಿತು. ಆ ಸಮಿತಿಯಲ್ಲಿ ಸನ್ಮಾನ್ಯ ಡಿ.ಬಿ. ಚಂದ್ರೇಗೌಡರು, ಅಂದರೆ ಈಗಿನ ವಿರೋಧ ಪಕ್ಷದ ನಾಯಕರು, ಜೆ. ನಾರಾಯಣ ಸ್ವಾಮಿರವರು, ಸನ್ಮಾನ್ಯ ಕೆ. ಪ್ರಭಾಕರ್ ರೆಡ್ಡಿಯವರು, ಸನ್ಮಾನ್ಯ ಟಿ. ವಿ. ನಾರಾಯಣ್‌ರವರು ಕೂಡ ಅದರಲ್ಲಿ ಇದ್ದರು, ಈ ವರದಿಯನ್ನು ಪುನಃ ಪರಿಶೀಲನೆ ಮಾಡಲಿಕ್ಕೆ ಮತ್ತೊಂದು ಸಮಿತಿ ಬೇಕೆಂದು ಹೇಳಿ ಡಾ ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಲಾಗಿತ್ತು. ಡಾ. ವೆಂಕಟೇಶ್‌ರವರು ದಿನಾಂಕ: ೩-೬-೧೯೮೮ರಂದು ಸಮಿತಿಗೆ ರಾಜೀನಾಮೆಯನ್ನು ಕೊಟ್ಟರು. ಅವರ ರಾಜೀನಾಮೆಯನ್ನು ಆಗ ಇದ್ದ ಪ್ರೆಸಿಡೆಂಟರ ಆಡಳಿತದಲ್ಲಿ ಸ್ವೀಕರಿಸಲಿಲ್ಲ. ಅಂತಿಮ ವರದಿಯನ್ನು ಕೊಡಬೇಕೆಂದು ಅವರನ್ನೇ ಮುಂದುವರಿಸಿದರು. ಆಮೇಲೆ ಕೊನೆಗೆ ೧೫-೧೧-೮೯ರವರೆಗೆ ಅವರ ವರದಿ ಬರದೇ ಇದ್ದ ಕಾರಣ. ಡಾ. ಸರೋಜಿನಿ ಮಹಿಷಿಯವರ ವರದಿಯನ್ನು ಜಾರಿಗೆ ತರುವುದಕ್ಕೆ ತಡ ಮಾಡಬಾರದೆಂದೂ ಆ ವರದಿಯನ್ನು ಪರಿಶೀಲನೆ ಮಾಡುವುದಕ್ಕಾಗಿ ಹಾಗೂ ಅವರು ಮಾಡಿರುವ ಎಲ್ಲಾ ಶಿಫಾರಸ್‌ಗಳನ್ನು ನಾವು ಪರಿಗಣಿಸಿ ಆದಷ್ಟು ಬೇಗ ಅನುಷ್ಠಾನ ಮಾಡುವುದಕ್ಕಾಗಿ ಒಂದು ಕ್ಯಾಬಿನೆಟ್ ಉಪ ಸಮಿತಿಯನ್ನು ನನ್ನ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಆ ಸಮಿತಿಯಲ್ಲಿ ಆರೋಗ್ಯ ಸಚಿವರಾದ ಶ್ರೀಮತಿ ಮನೋರಮ ಮಧ್ವರಾಜ್ ರವರು ಮತ್ತು ವಿದ್ಯಾ ಸಚಿವರಾದ ಶ್ರೀ ಕೆ. ಹೆಚ್. ರಂಗನಾಥ್‌ರವರು ಕೂಡ ಇದ್ದಾರೆ. ಈಗಾಗಲೇ ಆ ಸಮಿತಿ ಕಾರ್ಯೋನ್ಮುಖವಾಗಿದೆ. ಆದಷ್ಟು ಬೇಗ ಸಮ್ಮ ಕ್ಯಾಬಿನೆಟ್ ಸಬ್ ಕಮಿಟಿ ರಿಪೋರ್ಟ್ ಸಲ್ಲಿಸಿದ ಕೂಡಲೇ ಇದರ ಶಿಫಾರಸ್‌ಗಳನ್ನು ಅನುಷ್ಠಾನ ಮಾಡಲಿಕ್ಕೆ ಸರ್ಕಾರ ಕಾರ್ಯಕ್ರಮ ಕೈಗೊಳ್ಳುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.— ಅಧ್ಯಕ್ಷರೇ, ಇವತ್ತಿನ ದಿವಸ ಕನ್ನಡಿಗರಲ್ಲಿ ಅನ್ಯಾಯವಾಗುತ್ತಿರುವುದನ್ನು ನೋಡಿದರೆ ಯಾರೂ ಸಹಿಸಲಾರರು. ಅದೇ ತಮಿಳರಿಗೆ ಹಾಗೂ ಮಲೆಯಾಳಿಗಳಿಗೆ ಅನ್ಯಾಯ ಆಗುವುದೆಂದು ಸರ್ಕಾರ ಆಕ್ಸಿಪ್ಟ್ ಮಾಡುತ್ತಿಲ್ಲ. ಆ ವರದಿಯು ಕನ್ನಡಿಗರ ಪರವಾಗಿರುವುದರಿಂದ ನಿಮ್ಮ ಅಧಿಕಾರಿಗಳು ಅದನ್ನು ಅನುಷ್ಠಾನವಾಗಲು ಬಿಡುತ್ತಿಲ್ಲ. ನಾವು ಕರ್ನಾಟಕ ರಾಜ್ಯವಾಯಿತು ಎಂದು ಹೇಳಂಕ್ಕೇವೆ. ಕನ್ನಡಿಗರಿಗೆ ನೌಕರಿ ಸಿಗುತ್ತದೆ ಎನ್ನುತ್ತೇವೆ. ಆದರೆ ನೂರಕ್ಕೆ ೮೦ರಷ್ಟು ಜನ ತಮಿಳರು ಮಲೆಯಾಳಿಗಳಿಗೆ ನೌಕರಿ ಸಿಕ್ಕುವುದು. ಸರೋಜಿನಿ ಮಹಿಷಿ ವರದಿ ಬಂದು ನಾಲ್ಕು ವರ್ಷ ಆದರೂ ಅದನ್ನು ಅನುಷ್ಠಾನ ಮಾಡಿಲ್ಲ ಅದರ ಬಗ್ಗೆ ಡಾ. ವೆಂಕಟೇಶ್ ಸಮಿತಿ ಎಂದು ಹೇಳಿದರಿ ಅದನ್ನೂ ಮಾಡಲಿಲ್ಲ, ಈಗ ಕ್ಯಾಬಿನೆಟ್ ಸಬ್ ಕಮಿಟಿ ಎಂದು ಮಾಡಿದ್ದೀರಿ. ನಂತರ ಶಾಸಕರ ಸಮಿತಿ ಎಂದು ಆಮೇಲೆ ಹೇಳುತ್ತೀರಿ. ಇದರಿಂದ ಕನ್ನಡಿಗರಿಗೆ ಅನ್ಯಾಯವಾಗುತ್ತಿರುವುದನ್ನು ನಾನು ಪ್ರತಿಭಟಿಸುತ್ತೇನೆ. ಈಗ ಒಂದು ವಿನಂತಿ ಹಾಕಿ. ಎರಡು ಮೂರು ತಿಂಗಳಲ್ಲಿ ಅಥವಾ ಇಷ್ಟು ದಿವಸದಲ್ಲಿ ಅದನ್ನು ಅನುಷ್ಠಾನಕ್ಕೆ ತರುತ್ತೇವೆಂದು ಕಾಲಮಿತಿ ಹಾಕಿ. ತಾವು ಕ್ಯಾಬಿನೆಟ್ ಸಬ್ ಕಮಿಟಿ ಅಧ್ಯಕ್ಷರಿದ್ದೀರಿ. ತಾವು ದಕ್ಷರೂ, ಜಾಣರೂ ಆಗಿದ್ದೀರಿ, ಈ ಕಾಲಮಿತಿ ಏನೆಂಬುದನ್ನು ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.— ಅಧ್ಯಕ್ಷರೇ, ಒಂದು ಮಾತನ್ನು ಒಪ್ಪುತ್ತೇನೆ,

ಅಧ್ಯಕ್ಷರು.— ತಾವು ದಕ್ಷರೂ, ಒಳ್ಳೆಯವರೂ ಅನ್ನುವುದನ್ನೇ....

ಶ್ರೀ ಎಂ. ವೀರಪ್ಪ ಮೊಯಿಲಿ.— ಕೆಲವು ಸಲ ಸಮಿತಿಗಳ ಮೇಲೆ ಸಮಿತಿ ಮಾಡಿ ಅನುಷ್ಠಾನ ಮಾಡಬೇಕಾದ್ದನ್ನು ಮಾಡದೆ, ಅದನ್ನು ದಾರಿ ತಪ್ಪಿಸುವ ಕೆಲಸ ಕೆಲವು ಸಾರಿ ಕೆಲವು ಸರ್ಕಾರಗಳೇ ಮಾಡಿವೆ. ಆದರೆ ನಮ್ಮ ಸರ್ಕಾರ ಡಾ. ವೆಂಕಟೇಶ್‌ರವರು ಕೊಟ್ಟ ಮಧ್ಯಂತರ ವರದಿಯನ್ನು

ಮತ್ತೆ ವಿಸ್ತರಿಸುವುದು ಬೇಡವೆಂದು ಕ್ಯಾಬಿನೆಟ್‌ಗೆ ಅದನ್ನು ತರಿಸಿ ಅಲ್ಲಿ ಪರಿಶೀಲಿಸಿ ಅನಂತರ ಒಂದು ಕ್ಯಾಬಿನೆಟ್ ಉಪ ಸಮಿತಿ ಮಾಡಿದೆವು. ನಮ್ಮ ಉದ್ದೇಶ ಆನೆಸ್ಟಾಗಿರದಿದ್ದರೆ ಇಷ್ಟೆಲ್ಲ ನಾವು ಮಾಡುತ್ತಿರಲಿಲ್ಲ. ಈಗಾಗಲೇ ಒಂದೆರಡು ಮೀಟಿಂಗ್ ಮಾಡಿದ್ದೇವೆ, ನಮ್ಮ ಉಪಸಮಿತಿ ಅದರ ಕೆಲಸ ಮುಗಿಸಿ ಆದಷ್ಟು ಬೇಗ ಕ್ಯಾಬಿನೆಟ್ ಮುಂದೆ ಕೊಂಡೊಯ್ಯುತ್ತೇವೆ. ಇದಕ್ಕೆ ಹಲವಾರು ತಿಂಗಳು ಹಿಡಿಯುವುದಿಲ್ಲ. ಒಂದು ತಿಂಗಳಲ್ಲಿ ಬಹುಶಃ ವರದಿ ಕೊಡುತ್ತೇವೆ. ಆದಷ್ಟು ಶೀಘ್ರ ಆ ಶಿಫಾರಸ್‌ಗಳನ್ನು ಅನುಷ್ಠಾನಗೊಳಿಸಲು ಎಲ್ಲ ರೀತಿಯ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಆದ್ದರಿಂದ ಇದನ್ನು ತಡೆಹಿಡಿಯಬೇಕೆನ್ನುವ ಪ್ರಮೇಯ ಖಂಡಿತವಾಗಿಯೂ ಸರ್ಕಾರಕ್ಕೆ ಇಲ್ಲ. ಇದನ್ನು ಪ್ರಾಮಾಣಿಕವಾಗಿ ಅನುಷ್ಠಾನ ಮಾಡಲು ಏನು ಕ್ರಮ ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಕಟಿಬದ್ಧವಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ.— ಅಧ್ಯಕ್ಷರೇ, ಕನ್ನಡ ನಾಡು ನುಡಿ, ಗಡಿ ಹಾಗೂ ಉದ್ಯೋಗಗಳ ವಿಚಾರದಲ್ಲಿ ಹಿಂದಿನ ಸರ್ಕಾರ ಅನೇಕ ಸಮಿತಿಗಳನ್ನು ನೇಮಕ ಮಾಡಿತು. ಅವುಗಳೆಂದರೆ ಕನ್ನಡ ಕಾವಲು ಸಮಿತಿ, ಸರೋಜಿನಿ ಮಹಿಷಿ ಸಮಿತಿ, ಅದನ್ನು ಅನುಷ್ಠಾನಗೊಳಿಸಲು ಡಾ. ವೆಂಕಟೇಶ್ ಸಮಿತಿಗಳನ್ನು ರಚನೆ ಮಾಡಿತು. ಈಗ ಅವುಗಳ ಗತಿ ಏನಾಗಿದೆ ಆ ಸಮಿತಿಗಳನ್ನು ಸರ್ಕಾರ ರದ್ದು ಮಾಡಿದೆಯೇ ಅಥವಾ ಮುಂದುವರಿಸಿದೆಯೇ ? ವೆಂಕಟೇಶ್ ಸಮಿತಿ ಪೂರ್ತಿ ಕಾಲ ಕೆಲಸ ಮಾಡಲಿಲ್ಲ. ಈ ಸಮಿತಿಗಳ ಬಗ್ಗೆ ಸರ್ಕಾರದ ನಿಲುವು ಏನು ?

ಶ್ರೀ ಎಂ. ವೀರಪ್ಪ ಮೊಯಿಲಿ.— ಡಾ. ಸರೋಜಿನಿ ಮಹಿಷಿಯವರ ಶಿಫಾರಸ್‌ಗಳನ್ನು ಹೇಗೆ ಅನುಷ್ಠಾನ ಮಾಡಬೇಕೆಂಬ ಬಗ್ಗೆ ಡಾ. ವೆಂಕಟೇಶ್ ಸಮಿತಿ ರಚನೆಯಾಯಿತು. ಅದರಲ್ಲಿ ತಾವು ಸಹ ಇದ್ದಿರಿ. ಕೆಲವು ಮಧ್ಯಂತರ ವರದಿಗಳನ್ನೂ ಸಹ ಕೊಟ್ಟಿದ್ದೀರಿ. ಈ ಸಮಿತಿ ಕನ್ನಡಿಗರಿಗೆ ಸಿಗಬೇಕಾದ ಉದ್ಯೋಗಗಳಿಗೇ ಸೀಮಿತವಾದದ್ದು.

ಅದನ್ನು ಈಗ ನಾನು ಹೇಳಿದ ಪ್ರಕಾರ ಅನುಷ್ಠಾನ ಮಾಡಲಿಕ್ಕೆ ತೀವ್ರ ಕಾರ್ಯಕ್ರಮವನ್ನು ತಕ್ಷಣ ತೆಗೆದುಕೊಳ್ಳುತ್ತೇವೆ. ಕ್ಯಾಬಿನೆಟ್‌ನ ಉಪಸಮಿತಿಯು ವರದಿ ಬಂದ ಕೂಡಲೇ ಮಾಡುತ್ತೇವೆ. ಇನ್ನು ಕನ್ನಡ ಕಾವಲು ಸಮಿತಿಯಾಗಲಿ, ಬೇರೆ ಕನ್ನಡ ನಾಡು ನುಡಿ ಸಂಸ್ಕೃತಿಯ ಅಭಿವೃದ್ಧಿಗೆ ಯಾವುದೇ ರೀತಿಯಲ್ಲಿ ಚ್ಯುತಿ ಬರದ ರೀತಿಯಲ್ಲಿ ಮತ್ತು ಇದು ವಿಸ್ತೃತವಾಗಿ ಕನ್ನಡ ನಾಡಿನಲ್ಲಿ ಕನ್ನಡ ನಾಡು ನುಡಿ ಸಂಸ್ಕೃತಿಯ ಅಭಿವೃದ್ಧಿಗೆ ನಮ್ಮ ಸರ್ಕಾರ ಯಾವುದೇ ರೀತಿಯಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ. ಅದಕ್ಕೆ ನಾವು ಕನ್ನಡ ಕಾವಲು ಸಮಿತಿಯನ್ನು ಏನು ಮಾಡಬೇಕು, ಮತ್ತು ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡಾ ಇದರ ಬಗ್ಗೆ ಹೇಳಿಕೆಯನ್ನು ಕೂಡಾ ಕೊಟ್ಟಿದ್ದಾರೆ. ಯಾವ ಸ್ವರೂಪದಲ್ಲಿ ಕನ್ನಡದ ನಾಡು ನುಡಿ ಸಂಸ್ಕೃತಿಯನ್ನು ಕಾಯ್ದುಕೊಳ್ಳುವುದಕ್ಕೆ ನಾವು ಯಾವ ಸಮಿತಿಗಳನ್ನು ಮಾಡಬೇಕು, ಇದರ ವಿಚಾರ ಸರ್ಕಾರದ ಪರಿಗಣನೆಯಲ್ಲಿದೆ. ಕಾವಲು ಸಮಿತಿಯ ಸ್ವರೂಪದಲ್ಲಿ ಮಾಡಬೇಕಾದರೆ ಈಗಾಗಲೇ ಅದು ವಜಾ ಆಗಿದೆ, ಅದು ಅಸ್ತಿತ್ವದಲ್ಲಿ ಇಲ್ಲ. ಅದನ್ನು ಪುನರ್ ರಚನೆ ಮಾಡಬೇಕೇ ಅಥವಾ ಪುನರ್ ರಚನೆ ಮಾಡುವುದಾದರೆ ಯಾವ ಸ್ವರೂಪದಲ್ಲಿ ಮಾಡಬೇಕು ಅಥವಾ ಕಾವಲು ಸಮಿತಿ ಇಲ್ಲದಿದ್ದರೆ ಬೇರೆ ಯಾವ ರೀತಿಯಲ್ಲಿ ಕನ್ನಡದ ಒಂದು ನುಡಿ ಮತ್ತು ಕನ್ನಡ ಸಂಸ್ಕೃತಿಯ ಅಭಿವೃದ್ಧಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯ ಇದೆ, ಇದೆಲ್ಲವನ್ನು ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತಿದೆ, ಇದಕ್ಕೆ ಸರಿಯಾದಂಥ ಕಾರ್ಯಕ್ರಮವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ.

ಶ್ರೀ ಮಾಟಾಳ್ ನಾಗರಾಜ್.— ಅಧ್ಯಕ್ಷರೇ, ಈಗ ಸಮಿತಿಯ ಮೇಲೆ ಸಮಿತಿ ಸರೋಜಿನಿ ಮಹಿಷಿ ಸಮಿತಿ ಆಯಿತು. ಅದಕ್ಕೆ ಒಂದು ಉಪಸಮಿತಿ. ಅದಾದಮೇಲೆ ಮತ್ತೊಂದು ಉಪಸಮಿತಿ, ಮತ್ತೆ ಒಂದು ನಿಮ್ಮ ವರದಿ ಆದಮೇಲೆ ಇನ್ನೊಂದು ಉಪಸಮಿತಿ, ಹಿಂದಿನ ಸರ್ಕಾರದವರು ಇದನ್ನು ನೇಮಿಸಿದ್ದು. ಸರೋಜಿನಿ ಮಹಿಷಿ ಸಮಿತಿಯನ್ನು ಹಿಂದಿನ ಸರ್ಕಾರ ಇದನ್ನು ನೇಮಿಸಿತ್ತು. ಅದಕ್ಕೆ ಒಂದು ಉಪಸಮಿತಿ ಮಾಡಿದೆ. ಈಗ ನಿಮ್ಮ ಸರ್ಕಾರ ಬಂದು ನೀವು ಒಂದು ಉಪಸಮಿತಿಯನ್ನು ಮಾಡಿಕೊಂಡಿದ್ದೀರಿ, ಈ ರೀತಿಯಿಂದ ಏನೂ ಪ್ರಯೋಜನವಾಗುವುದಿಲ್ಲ. ಒಂದು ಪ್ರಾಮಾಣಿಕವಾದಂಥ ನಿಲುವು ಏನು ನಿಮ್ಮ ಸರ್ಕಾರದ್ದು ಅದನ್ನು ಸ್ಪಷ್ಟವಾಗಿ ಹೇಳಬೇಕು. ನಿಮ್ಮ ಹೃದಯ ಬಿಚ್ಚಿ ಹೇಳಿ, ಸರ್ಕಾರದ ನಿಲುವು ಏನು ಎಂದು. ಕನ್ನಡಿಗರ ಉದ್ಯೋಗದ ಬಗ್ಗೆ ಸರ್ಕಾರದ ನಿಲುವೇನು ಎಂದು ತಮ್ಮ ಮುಖಾಂತರ ಕೇಳುವುದಕ್ಕೆ ಬಯಸುತ್ತೇನೆ. ಕನ್ನಡಿಗರ ಉದ್ಯೋಗದ ಬಗ್ಗೆ ನಿಮ್ಮ ಸರ್ಕಾರದ ನಿಲುವೇನು? ಸರೋಜಿನಿ ಮಹಿಷಿ ವರದಿ ಏನು ಹೇಳಿದೆ? ಅದನ್ನು ಈ ಸಭೆಗೆ ಹೇಳಿ. ಸರೋಜಿನಿ ಮಹಿಷಿ ಮೊದಲನೇ ವರದಿಯಲ್ಲಿ ಏನು ಹೇಳಿದೆ?

ಅಧ್ಯಕ್ಷರು.—ಸರೋಜಿನಿ ಮಹಿಷಿಯು ವರದಿಯನ್ನು ಎಲ್ಲರಿಗೂ ಹಂಚಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ನನಗೆ ಬಂದಿಲ್ಲ.

ಅಧ್ಯಕ್ಷರು.—ಆಗ ಅದನ್ನು ಕೊಟ್ಟಾಗ.

ಶ್ರೀ ವಾಟಾಳ್ ನಾಗರಾಜ್.—ಇವತ್ತು ಆ ಪ್ರಶ್ನೆ ಬಂದಿದೆ. ಈಗಾಗಲೇ ಸರೋಜಿನಿ ಮಹಿಷಿಯ ವರದಿಯನ್ನು ಕಸದ ಬುಟ್ಟಿಗೆ ಹೋಗಿದೆ. ಈ ರಾಜ್ಯದ ಕನ್ನಡಿಗರಿಗೆ ಎಲ್ಲಾ ಸರ್ಕಾರಗಳು ಸೇರಿ ವಿಷವನ್ನು ಕುಡಿಸುತ್ತಿದ್ದಾರೆ. ನೂರಕ್ಕೆ ಎಂಭತ್ತು ಭಾಗ ಹೊರಗಡೆಯಿಂದ ಬಂದಿರತಕ್ಕಂಥವರಿಗೆ ಈ ರಾಜ್ಯದಲ್ಲಿ ಉದ್ಯೋಗ ಸಿಗುತ್ತಿದೆ. ಕನ್ನಡಿಗರಿಗೆ ಕಸ ಗುಡಿಸತಕ್ಕಂಥ ಉದ್ಯೋಗ ಕೂಡಾ ಸಿಗುತ್ತಿಲ್ಲ. ಆದಕ್ಕೋಸ್ಕರವೇ ಒಂದು ಸಮಿತಿಯನ್ನು ಮಾಡಿದ್ದು, ಈ ಸರ್ಕಾರ ಈ ವಿಚಾರದಲ್ಲಿ ಬಂಗುಡೆಯನ್ನು ಬಿಡುವುದು ಬೇಡ ಈ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವು ಏನು?

ಶ್ರೀ ಎಂ. ವೀರಪ್ಪ ಮೊಯಿಲಿ.—ಡಾ॥ ಸರೋಜಿನಿ ಮಹಿಷಿ ಸಮಿತಿಯ ವರದಿ ಈಗಾಗಲೇ ಮುಂದ್ರಿತವಾಗಿದೆ, ನನಗನಿಸುತ್ತದೆ, ಸನ್ಮಾನ್ಯ ಸದಸ್ಯರಿಗೆ ಇಲ್ಲಿ ಸಿಗದಿದ್ದರೂ ಕೂಡಾ ಹಿಂದಿನ ಸದನಕ್ಕೆ ಅದನ್ನು ಹಂಚಿರಬೇಕು.

ಅಧ್ಯಕ್ಷರು.—ಸರೋಜಿನಿ ಮಹಿಷಿ ವರದಿಯನ್ನು ನಿಮಗೆ ನಾನು ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಬಹಳ ಹಳೆಯ ಕಥೆ. ಈ ವರದಿ ಲೈಬ್ರರಿಲ್ಲಿ ಪಬ್ಲಿಷ್ ಆಗಿದೆ. ಅದುದರಿಂದ ಅದು ಮಧ್ಯಂತರ ವರದಿ. ಪ್ರಥಮ ಮಧ್ಯಂತರ ವರದಿ ದ್ವಿತೀಯ ಮಧ್ಯಂತರ ವರದಿ, ಅದು ಕೂಡಾ ಮುದ್ರಿತವಾಗಿದೆ, ಈಗ ಸರ್ಕಾರದ ಉದ್ದೇಶ ಈಗ ಕ್ಯಾಬಿನೆಟ್‌ಗೆ ಎಲ್ಲಾ ಶಿಫಾರಸ್ಸುಗಳು ಬಂದಿದೆ. ಈಗ ನಾವು ಅದನ್ನು ಅನುಷ್ಠಾನ ಮಾಡಲಿಕ್ಕೆ ಮುಂದುವರೆಯತಕ್ಕಂಥ ಅಥವಾ ಅದನ್ನು ಮಾಡದೇ ಇರತಕ್ಕಂಥ ಒಂದು ಮನಸ್ಸು ನಮ್ಮಲ್ಲಿ ಇದ್ದರೆ ಬಹುಶಃ ಇನ್ನೊಂದು ಸಮಿತಿಯನ್ನು ಮಾಡಬಹುದಿತ್ತು.

ಶ್ರೀ ವಾಟಾಳ್ ನಾಗರಾಜ್.—ಸರ್ಕಾರದ ಉಪ ಸಮಿತಿಯನ್ನು ಮಾಡಿದ್ದೀರಿ. ಇದೇ ಉದ್ದೇಶದಿಂದಲೇ ಮಾಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಥವಾ ನಾವು ವೆಂಕಟೇಶ್‌ರವರ ಸಮಿತಿ ಅವಧಿಯನ್ನು ವಿಸ್ತರಿಸಬಹುದಿತ್ತು. We could have extended the term of the Venkatesh Committee. ಅದನ್ನು ಮಾಡಲಿಕ್ಕೆ ಹೋಗಲಿಲ್ಲ.

ಅಧ್ಯಕ್ಷರು.—ಅವರು ಇನ್ನೂ ಫೈನಲ್ ರಿಪೋರ್ಟ್‌ನ್ನು ಕೊಟ್ಟಿಲ್ಲವಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇ ಮಧ್ಯಂತರ ವರದಿಯನ್ನು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ವೆಂಕಟೇಶ್‌ರವರು ಕನ್ನಡಿಗರಿಗೆ ವಿರುದ್ಧವಾದ ವರದಿಯನ್ನು ಕೊಟ್ಟಿದ್ದಾರೆ. ಕನ್ನಡಿಗರಿಗೆ ವಿಷವನ್ನು ಕುಡಿಸಿದ್ದಾರೆ. ವೆಂಕಟೇಶ್ ವರದಿಯಿಂದ ಕನ್ನಡಿಗರಿಗೆ ಅನ್ಯಾಯವಾಗಿದೆ. ಇಂಥ ವರದಿಯನ್ನು ಕೊಟ್ಟಿದ್ದಾರೆ. ಸರೋಜಿನಿ ಮಹಿಷಿ ವರದಿಯು ವಿರುದ್ಧವಾಗಿ ವೆಂಕಟೇಶ್ ವರದಿ ತಯಾರಾದದ್ದು ಈಗಲಾದರೂ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿ, ಇವತ್ತು ಒಂದು ಅಂತಿಮವಾದ ತೀರ್ಮಾನವನ್ನು ಮಾಡಿ. ಇವತ್ತು ಕನ್ನಡಿಗರಿಗೇ ಉದ್ಯೋಗ ಎಂದು ಕಾನೂನನ್ನು ಮಾಡಿ ಕನ್ನಡ ಬಲ್ಲವರಿಗೆ, ಕನ್ನಡ ಬರೆಯಬಲ್ಲವರಿಗೆ, ಕನ್ನಡ ಮಾತನಾಡುವವರಿಗೆ, ಮಣ್ಣಿನ ಮಕ್ಕಳಿಗೆ ಉದ್ಯೋಗ ಎಂದು ಮಾಡಿ. ಈ ರೀತಿ ಮಾಡದೇ ನೀವು ತಪ್ಪುದಾರಿಗೆ ಎಳೆಯತಕ್ಕಂಥದ್ದು ಬೇಡ. ಇದು ಕನ್ನಡಿಗರಿಗೆ ಮಾಡಿರತಕ್ಕಂಥ ಮೋಸ. ವರದಿಯ ಮೇಲೆ ವರದಿ ಸಮಿತಿಗಳ ಮೇಲೆ ಸಮಿತಿ, ಇದು ಕನ್ನಡಿಗರಿಗೆ ಮಾಡಿರತಕ್ಕಂಥ ಒಂದು ಮೋಸವೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಎಲ್ಲಾ ವರದಿಗಳ ಶಿಫಾರಸ್ಸುಗಳು ನಮ್ಮ ಸರ್ಕಾರದ ಮುಂದೆ ಇದೆ. ಕ್ಯಾಬಿನೆಟ್ ಸಂಪುಟವನ್ನು ತಾವು ಇನ್ನೂ ಒಂದು ಸಮಿತಿಗೆ ಅಥವಾ ಇನ್ನೂ ಒಂದು ಕಮಿಷನ್‌ಗೆ ದಯವಿಟ್ಟು ಹೋಲಿಸಬೇಡಿ. ಕ್ಯಾಬಿನೆಟ್ ಸಬ್ ಕಮಿಟಿ ಮಾಡಿರುವ ಉದ್ದೇಶವೆಂದರೆ ಈ ಶಿಫಾರಸ್ಸುಗಳನ್ನು ಆದಷ್ಟು ಜಾಗ್ರತೆಯಲ್ಲಿ ಪ್ರಾಮಾಣಿಕವಾಗಿ ಅನುಷ್ಠಾನ ಮಾಡಲಿಕ್ಕೆ ಯಾವ ಯಾವ ದಾರಿ ಹುಡುಕಬೇಕು ಎಂದು ನೋಡಲು. ಏಕೆಂದರೆ, ಶಿಫಾರಸ್ಸುಗಳು ಬಂದ ಕೂಡಲೇ ಗವರ್ನಮೆಂಟ್ ಆರ್ಡರ್ ಅನ್ನು ಜಾರಿ ಮಾಡಲಿಕ್ಕೆ ಅಲ್ಲಿ ಸಾಕಷ್ಟು ಅಡೆತಡೆಗಳು ಹಾಗೂ ತೊಂದರೆಗಳು ಇವೆ ಅಅಡೆತಡೆಗಳನ್ನು ಹಾಗೂ ತೊಂದರೆಗಳನ್ನು ನಿವಾರಣೆಮಾಡಬೇಕು ಎಂದು ಪ್ರಾಮಾಣಿಕವಾಗಿ ಏನು

ಶಿಫಾರಸ್ಸುಗಳು ಇವೆ, ಅಂದರೆ ಕನ್ನಡಿಗರಿಗೆ ಉದ್ಯೋಗವನ್ನು ಒದಗಿಸಲಿಕ್ಕೆ, ಯಾವ ಅವಕಾಶವನ್ನು ನಾವು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕು ಎಂಬ ಬಗ್ಗೆ ಪ್ರಾಮಾಣಿಕವಾದ ಕಳಕಳಿ ಸರ್ಕಾರಕ್ಕೆ ಇದೆ. ಆದ್ದರಿಂದ ನಾವು ಯಾವುದೇ ರೀತಿಯಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗುವಂತಹ ದಿಶೆಯಲ್ಲಿ ಅನ್ಯಾಯ ಆಗದ ರೀತಿಯಲ್ಲಿ ನಮ್ಮ ಸರ್ಕಾರ ಈ ಶಿಫಾರಸ್ಸುಗಳನ್ನು ಅನುಷ್ಠಾನ ಮಾಡುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತದೆಂದು ಈ ಸದನಕ್ಕೆ ತಿಳಿಸಲು ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಯಾವಾಗ ನಿರ್ಣಯ ತೆಗೆದುಕೊಳ್ಳುತ್ತೀರಿ ?

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ತಾನೇ ಮಾನ್ಯ ಕಾನೂನು ಮಂತ್ರಿಯವರು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಮಿತಿ ಮೇಲೆ ಸಮಿತಿ ಎಂದು ಹೇಳಿದ್ದಾರೆ. ಇದರ ಔಚಿತ್ಯದ ಬಗ್ಗೆ ಪೂರ್ತಿನಾಡುವಾಗ ನಿಜವಾಗಲೂ ಕೂಡ ಈ ಸಮಿತಿಗಳ ಅವಶ್ಯಕತೆಯೇ ಇರಲಿಲ್ಲ. ಸರೋಜಿನಿ ಮಹಿಷಿ ಸಮಿತಿಯ ಅವಶ್ಯಕತೆ ಕೂಡ ಇರಲಿಲ್ಲ. ಕನ್ನಡಿಗರಿಗೆ ನಮ್ಮ ರಾಜ್ಯದಲ್ಲಿ ಉದ್ಯೋಗಾವಕಾಶದ ರಕ್ಷಣೆ ಕೊಡಬೇಕು ಎಂದು ನಿಜವಾಗಿ ನಿಮಗೆ ಮನಸ್ಸು ಇದ್ದರೆ ಈಗಾಗಲೇ ರಾಜ್ಯಗಳಲ್ಲಿ ಮಾಡಿರುವಂತಹ ಕಾನೂನು ಕಡೆ ಸ್ವಲ್ಪ ತಮ್ಮ ದೃಷ್ಟಿ ಹರಿಸಬೇಕು. There is an act called Employment Requirement as to Residents Act. ಎಂದು ಬೇರೆ ರಾಜ್ಯದವರು ಕಾನೂನು ಮಾಡಿದ್ದಾರೆ. ಇಲ್ಲಿ ಸಹ ಕಾನೂನು ಮಂತ್ರಿಗಳವರ ಅಧ್ಯಕ್ಷತೆಯಲ್ಲಿ ಇಂತಹ ಒಂದು ಸಮಿತಿ ಇರುವುದು ಒಳ್ಳೆಯದಾಯಿತು. Employment Requirements as to Residents Act. ಇದು ಸಂವಿಧಾನ ಬಾಹಿರವೆಂದು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದಾಗ, ಇದು ಸಂವಿಧಾನ ಬಾಹಿರ ಅಲ್ಲ, ಇದು ಸಂವಿಧಾನ ಬದ್ಧವಾದುದು ಎಂದು ಹೇಳಿ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಈ ಕಾರಣದಿಂದ ಈಗ ಉಪ ಸಮಿತಿ ಎಂದು ಏನಿದೆ, ಅದು ಒಂದು ಕೆಲಸ ಮಾಡಿದರೆ ಸಾಕು. ಇಂತಹ ಒಂದು ಕಾನೂನು ಮಾಡಿ ಇಲ್ಲಿರುವಂತಹ ಕೈಗಾರಿಕೆಗಳಿಗೆಲ್ಲಾ ಆ ಒಂದು ಷರತ್ತಿನಮೇಲೆ ಪರವಾನಗಿಯನ್ನು ಮಂಜೂರು ಮಾಡಿ. ಅಷ್ಟು ಕೆಲಸ ಮಾಡಿದರೆ ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರ ಸಲಹೆಯನ್ನು ನಾನು ಖಂಡಿತವಾಗಿಯೂ, ಪ್ರಾಮಾಣಿಕವಾಗಿಯೂ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಕೊನೆಯಪಕ್ಷ ಸರೋಜಿನಿ ಮಹಿಷಿ ಅವರ ವರದಿ ಅನುಷ್ಠಾನಕ್ಕೆ ಬರುವವರೆಗೆ ಆದರೂ ಯಾವುದೇ ಒಂದು ಹೊಸ ಉದ್ಯೋಗವನ್ನು ಸೃಷ್ಟಿ ಮಾಡುವುದಿಲ್ಲ ಎಂದು ಈ ಸದನಕ್ಕೆ ಆಶ್ವಾಸನೆಯನ್ನು ಕೊಡುವುದಕ್ಕೆ ಸಾಧ್ಯ ಇದೆಯೇ ? ಏಕೆಂದರೆ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ ಎನ್ನುವುದು ನಿಮಗೆ ಕೂಡ ಅನುಭವ ಆಗಿರುವುದರಿಂದ ಇದನ್ನು ಅನುಷ್ಠಾನಗೊಳಿಸುವುದಕ್ಕೆ ಮುಂಚೆ ಯಾವುದೇ ಒಂದು ಹೊಸ ಉದ್ಯೋಗಕ್ಕೆ ನೇಮಕ ಮಾಡುವುದಿಲ್ಲ ಎಂಬ ಆಶ್ವಾಸನೆಯನ್ನು ಈ ಸದನಕ್ಕೆ ಕೊಡುತ್ತಾರೆಂದು ಆಶಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲಿ ಏನು ಆಗಿನೆ ಅಂದರೆ ನಾವು ಯಾವುದೇ ಒಂದು ವ್ಯಾಕ್ಯೂಮ್‌ನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂಬ ಭಾವನೆಯನ್ನು ಮಾನ್ಯ ಸದಸ್ಯರು ಈ ಸದನದಲ್ಲಿ ಇಟ್ಟುಕೊಳ್ಳಬಾರದು. ಏಕೆಂದರೆ ಸರೋಜಿನಿ ಮಹಿಷಿ ವರದಿ ಇರಲಿ ಅಥವಾ ಇಲ್ಲದಿರಲಿ, ಸರೋಜಿನಿ ಮಹಿಷಿ ವರದಿ ಅಥವಾ ಡಾ, ವೆಂಕಟೇಶ್ ಅವರ ವರದಿಯಿಂದ ಈಗಿರತಕ್ಕ ಕಾನೂನುಗಳು ಏನಿವೆ, ಅಥವಾ ಇತಿ ಮಿತಿಗಳು ಏನಿವೆ, ಕನ್ನಡಿಗರಿಗೆ ಉದ್ಯೋಗ ಕೊಡಬೇಕು ಎಂದು. ಅದನ್ನು ಹೆಚ್ಚು ವಿಸ್ತೃತ ಮಾಡುತ್ತೇವೆ. ಅದನ್ನು ಯಾವ ರೀತಿ ಸಂವಿಧಾನ ಬದ್ಧವಾಗಿ ಮತ್ತು ಕಾನೂನು ಬದ್ಧವಾಗಿ ಬಲಪಡಿಸಲಿಕ್ಕೆ ಅಥವಾ ಶಕ್ತಿ ಕೊಡಲಿಕ್ಕೆ ಏನು ಸಾಧ್ಯ ಆಗುತ್ತದೆ ಅದನ್ನು ಈಗ ಮಾಡುತ್ತಿದ್ದೇವೆ, ಈಗ ಇರತಕ್ಕ ಸರ್ಕಾರದ ಆದೇಶಗಳು. ಅಥವಾ ಬೇರೆ ಬೇರೆ ಒಂದು ನಿಯಮಗಳಿಂದ ಕೂಡ ಕನ್ನಡಿಗರಿಗೆ ಉದ್ಯೋಗವನ್ನು ಕೊಡತಕ್ಕಂಥಹ ಒಂದು ವ್ಯವಸ್ಥಿತವಾದ ಪರಿಕ್ರಮ ಇದೆ. ನಾನು ಇಲ್ಲವೆಂದು ಹೇಳುವುದಲ್ಲ. ಇಲ್ಲದಿರುವುದನ್ನು ನಾವು ಹೊಸದಾಗಿ ಸರೋಜಿನಿ ಮಹಿಷಿ ಸಮಿತಿ ಮೂಲಕ ಅಥವಾ ವೆಂಕಟೇಶ್ ಸಮಿತಿ ಮೂಲಕ ಮಾಡುವುದು ಏನಿಲ್ಲ. ಈಗಾಗಲೇ ಇದೆ. ಆದರೆ ಆ ಒಂದು ವಾತಾವರಣವನ್ನು ಇನ್ನೂ ಹೆಚ್ಚು ಶಕ್ತಿ ತುಂಬಲಿಕ್ಕೆ ಅಥವಾ ಬಲಪಡಿಸಲಿಕ್ಕೆ ಏನು ಕಾರ್ಯಕ್ರಮ ಮಾಡಬೇಕು, ಆ ಶಿಫಾರಸ್ಸುಗಳನ್ನು ಪರಿಷ್ಕರಿಸಿ ಅಥವಾ ಕ್ರೋಢೀಕರಿಸಿ ಆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ಈ ಸಮಿತಿ ಇದೆಯೇ ಹೊರತು, ಏನು ಇವೊತ್ತು ಕನ್ನಡಿಗರಿಗೆ ಉದ್ಯೋಗ ಕೊಡತಕ್ಕಂಥ ರಕ್ಷಣೆ ಬಗ್ಗೆ ಯಾವ ಕಾರ್ಯಕ್ರಮಗಳೂ ಇಲ್ಲ, ಯಾವ

ವಾತಾವರಣ ಕೂಡ ಇಲ್ಲ, ಯಾವ ಒಂದು ಪರಿಸ್ಥಿತಿ ಕೂಡ ಇಲ್ಲ ಎಂಬ ಭಾವನೆ ನಮ್ಮ ಸದನದ ಶಾಸಕರಿಗೆ ಇರಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ —ಈ ಬಗ್ಗೆ ತನಿಖೆ ಮಾಡಿದರೆ ಗೊತ್ತಾಗುತ್ತದೆ. ೧೦೦ಕ್ಕೆ ೮೦ ಭಾಗ ಹೊರಗಡೆಯವರಿಗೆ ಇಲ್ಲಿನ ಉದ್ಯೋಗಗಳು ಹೋಗಿವೆ. ವಿಕ್ರಾಂತ್ ಟೈಮರ್ಸ್, ಕುದುರೆ ಮುಖ ಇತ್ಯಾದಿ ಕಾರ್ಖಾನೆಗಳಲ್ಲಿ ಎಷ್ಟು ಜನ ಇದ್ದಾರೆ ? ರಾಷ್ಟ್ರದ ಕೈಗಾರಿಕೆಗಳಲ್ಲಿ, ಬೇರೆ ಬೇರೆ ಕೈಗಾರಿಕೆಗಳಲ್ಲಿ ಎಷ್ಟು ಜನ ಕನ್ನಡಿಗರು ಇದ್ದಾರೆ ? ತನಿಖೆ ಮಾಡಿ ನೋಡಿದರೆ ೧೦೦ಕ್ಕೆ ೯೦ ಭಾಗ ಉದ್ಯೋಗ ಬೇರೆ ರಾಜ್ಯದವರಿಗೆ ಹೋಗಿದೆ.

ಪ್ರಶ್ನೆ ಸಂಖ್ಯೆ ೧೨೦ (೪೦೧)

ಶ್ರೀ ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಮತ್ತು ೧೨೭ನೇ ಪ್ರಶ್ನೆ ಶ್ರೀ ಜಿ. ಎಸ್. ಆಚಾರ್ ರವರದ್ದು. ಇವೆರಡೂ ಒಂದೇ ವಿಷಯ ಆಗಿರುವುದರಿಂದ ಶ್ರೀ ಆಚಾರ್ ರವರು ಪ್ರಶ್ನೆ ಹಾಕಲಿ ಎರಡಕ್ಕೂ ಜೊತೆಯಲ್ಲಿ ಉತ್ತರಗಳನ್ನು ಕೊಡುತ್ತೇನೆ.

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಜಿ.ಎಸ್. ಆಚಾರ್‌ರವರು ಅವರ ಪರವಾಗಿ ಪ್ರಶ್ನೆ ಕೇಳಲು ನನಗೆ ಅನುಮತಿ ಕೊಟ್ಟಿದ್ದಾರೆ. ಆದ್ದರಿಂದ ನಾನು ಅವರ ಪರವಾಗಿ ಪ್ರಶ್ನೆ ಕೇಳುತ್ತಿದ್ದೇನೆ.

ಅಧ್ಯಕ್ಷರು.—ಆಗಬಹುದು.

ಸ್ವಾತಂತ್ರ್ಯ ಹೋರಾಟಗಾರರ ಪೆನ್‌ಷನ್ ಬಗ್ಗೆ

೩೬೫. ಶ್ರೀ ಜಿ. ಎಸ್, ಆಚಾರ್ (ಬೈಂದೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸ್ವಾತಂತ್ರ್ಯ ಹೋರಾಟಗಾರರು ಪೆನ್‌ಷನ್‌ಗೆ ಅರ್ಜಿ ಸಲ್ಲಿಸಿದ್ದ ಇನ್ನೂ ಮಂಜೂರಾಗದೇ ಇರುವ ಅರ್ಜಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡಿ ಎಂದಿನಿಂದ ಬಾಕಿ ಇದೆ ಎಂಬುದರ ಮಾಹಿತಿಯೊದಗಿಸುವುದು).

ಆ) ಈ ಅರ್ಜಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಎಷ್ಟು ಕಾಲಾವಕಾಶ ಬೇಕಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು, ಸಂಸದೀಯ ಮತ್ತು ವ್ಯವಹಾರಗಳ ಸಚಿವರು).—(ಮುಖ್ಯಮಂತ್ರಿಗಳ ಪರವಾಗಿ)

ಅ) ಸುಮಾರು ೨೬೦ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ. ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ನೀಡುವ ಯೋಜನೆಯನ್ನು ೧೯೬೯ ನೇ ಸಾಲಿನಿಂದ ಜಾರಿಗೆ ತಂದಿದೆ. ಈ ಯೋಜನೆಯನ್ನು ಪ್ರಾರಂಭಿಸಿದಂದಿನಿಂದ ಆಯಾಯಾ ಕಾಲಕಾಲಕ್ಕೆ ನಿಯಮಾವಳಿಗಳನ್ನು ತಿದ್ದುಪಡಿ ಮಾಡಲಾಗಿರುತ್ತದೆ. ಸದರೀ ಯೋಜನೆಯಡಿಯಲ್ಲಿ ರಾಜ್ಯಗೌರವಧನ ಮಂಜೂರಾತಿಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಕಾಲಕಾಲಕ್ಕೆ ಮುಂದುವರೆಸಲಾಗುತ್ತಿದ್ದು, ದಿನಾಂಕ ೩೧-೧೨-೮೨ ರಲ್ಲಿ ಅಂತಿಮವಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿ ನಿರ್ಧರಿಸಲಾಗಿದೆ. ಯೋಜನೆಯ ಪ್ರಾರಂಭದಿಂದ ಇಲ್ಲಿಯವರೆಗೆ ರಾಜ್ಯ ಗೌರವಧನ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದವರಲ್ಲಿ ಯಾರ್ಯಾರು ಯಾವ ಸಮಯದಲ್ಲಿ ಅರ್ಜಿ ಸಲ್ಲಿಸಿದ್ದಾರೆಂಬ ಬಗ್ಗೆ ಮಾಹಿತಿ ನೀಡಲು ದುಸ್ತರವಾಗುತ್ತದೆ. ಆದಾಗ್ಯೂ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ೧೯೬೯ ರಿಂದ ಇಲ್ಲಿಯವರೆಗೆ ಸುಮಾರು ೩೧,೧೯೬ ಅರ್ಜಿಗಳಂ ರಾಜ್ಯ ಗೌರವಧನ ಮಂಜೂರಾತಿ ಕೋರಿ ಸರ್ಕಾರಕ್ಕೆ ಬಂದಿರುತ್ತವೆ. ಇಲ್ಲಿಯವರೆಗೆ ಸುಮಾರು ೧೯,೫೫೮ (೩೧-೩-೯೦ ರ ವರೆಗೆ) ಮಂದಿನ ರಾಜ್ಯ ಗೌರವಧನ ಮಂಜೂರಾತಿ ನೀಡಿದ್ದು ಸುಮಾರು ೨,೬೦೦ ರಾಜ್ಯ ಗೌರವಧನ ಅರ್ಜಿಗಳು ಇನ್ನೂ ವಿಂಜೂರಾಗದೇ ಬಾಕಿ ಉಳಿದಿವೆ.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.